MVC .No.58/2025
P.W-3

**ದಿನಾಂಕ 02.07.2026 ರಂದು ಅರ್ಜಿದಾರರ ಪರ ಸಾಕ್ಷಿದಾರರಾದ ಡಾ. ಉಮೇಶ್ ಎಂ ಬಿನ್ ಮಂಜಪ್ಪ ಜಿ. ಇವರು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು, ಇವರನ್ನು ಪಿಡಬ್ಲ್ಯೂ3 ಎಂದು ಪರಿಗಣಿಸಲಾಯಿತು.**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ನಿಜ ಇರುತ್ತವೆ ಮತ್ತು ಅದನ್ನು ನಾನೇ ಹೇಳಿ ಬರೆಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯವಿಚಾರಣೆಃ ಶ್ರೀ ಕೆ.ಬಿ.ಪಿ. ವಕೀಲರಿಂದ**

ನಾನು ಅರ್ಜಿದಾರರಿಗೆ ಸಂಬಂಧಿಸಿದಂತೆ, ಎಂ.ಎಲ್.ಸಿ ರಿಜಿಸ್ಟರನ ದೃಢೀಕೃತ ನಕಲನ್ನು ನಿಪಿ-25 ಎಂದು, ಕೇಸ್ ಶೀಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-26 ಎಂದು, 6 ಎಕ್ಸ್-ರೇ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ನಿಪಿ-27 ಎಂದು, 6 ಸಿ.ಟಿ ಸ್ಕ್ಯಾನ್ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟುಗೂಡಿಸಿ ನಿಪಿ-28 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ ಯು.ಎಂ.ಸಿ. ವಕೀಲರಿಂದ 2ನೇ ಎದುರುದಾರರ ಪರವಾಗಿ**

ಗಾಯಾಳು ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ತಾಜಾ ಗಾಯಗಳಾಗಿದ್ದವು. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬರುವ ಮೊದಲು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೂ ಆದರೆ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗಾಯಾಳು ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ಜ್ಞಾನ ಇತ್ತು ಎಂದರೆ ಸ್ವಲ್ಪ ಜ್ಞಾನ ಇತ್ತು ಎಂದು ಉತ್ತರಿಸುತ್ತಾರೆ. ಅವರನ್ನು ನಮ್ಮ ಆಸ್ಪತ್ರೆಗೆ ಯಾರು ಕರೆತಂದಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ಗಾಯಾಳುವನ್ನು ಯಾರು ಕರೆತಂದಿರುತ್ತಾರೆ ಅವರಿಂದ ಸಂಪೂರ್ಣ ಮಾಹಿತಿ ಪಡೆಯಬೇಕು ಎಂದರೆ ಸರಿ ಮತ್ತು ಅವರಿಂದ ಸಹಿಯನ್ನು ಪಡೆಯಬೇಕು ಎಂದರೆ ಸರಿ. ಗಾಯಾಳುವಿಗೆ ಜ್ಞಾನ ಇಲ್ಲದಿದ್ದರೆ ಅವರನ್ನು ಕರೆ ತಂದಿರುವವರಿಂದ ಮಾಹಿತಿ ಪಡೆಯಬೇಕು ಎಂದರೆ ಸರಿ. ವಾಹನದ ವಿವರಗಳನ್ನು ಸಹ ಪಡೆಯಬೇಕು ಎಂದರೆ ಸರಿ. ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ಅವುಗಳನ್ನು ನಮೂದಿಸಲು ಕಾಲಂಗಳು

ಇರುತ್ತವೆ ಎಂದರೆ ಸರಿ. ಆದರೂ ಸಹ ನಿಪಿ-25 ರಲ್ಲಿ ಅವುಗಳನ್ನು ಭರ್ತಿ ಮಾಡಿರುವುದಿಲ್ಲ ಎಂದರೆ ಸರಿ. ಆದ್ದರಿಂದ ನಾವು ಎಂ.ಎಲ್.ಸಿ ಯ ಸಂಪೂರ್ಣ ನಿಯಮಾವಳಿಗಳನ್ನು ಪರಿಪಾಲಿಸಿರುವುದಿಲ್ಲ ಎಂದರೆ ಸರಿ.

2. ಅರ್ಜಿದಾರರಿಗೆ ನಾನು, ಶಶಿಧರ ಕಾಮತ್ ಮತ್ತು ಮನೋಜ್ ವೈದ್ಯರು ಪರೀಕ್ಷಿಸಿರುತ್ತೇವೆ. ಗಾಯಾಳು ಆಸ್ಪತ್ರೆಗೆ ಸೇರಿದ ನಂತರ ಅವರು ಒಳರೋಗಿಯಾಗಿಯೇ ಇರುತ್ತಾರೆ ಎಂದರೆ ಸರಿ. ಎಂ.ಎಲ್.ಸಿ ಚಾರ್ಜ್ ಆಗಿ ರೂ. 4,000/- ಗಳನ್ನು ಚಾರ್ಜ್ ಮಾಡಿರುತ್ತೇವೆ. ಎಂ.ಎಲ್.ಸಿ ಮಾಡಬೇಕಾದ ಕರ್ತವ್ಯ ನಮ್ಮದು ಎಂದರೆ ಸರಿ. ಅದಕ್ಕೆ ಚಾರ್ಜ್ ಮಾಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ಎಂ.ಎಲ್.ಸಿ ಚಾರ್ಜ್ ಮಾಡುವ ಬಗ್ಗೆ ಯಾವುದೇ ಗೈಡ್ ಲೈನ್ ಇರುವುದಿಲ್ಲ. ದಿಃ 10.09.2024 ರಲ್ಲಿ ಅರ್ಜಿದಾರರು ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಸರಿ. ಆದ್ದರಿಂದ ಹೊರ ರೋಗಿಯಾಗಿ ಬಿಲ್ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದು ವರಿದ ಔಟ್ ಪೇಷೆಂಟ್ ಡಿಪಾರ್ಟ್ ಮೆಂಟ್ ನವರು ಮತ್ತು ಇನ್‌ಪೇಷಂಟ್ ನವರು ಪ್ರತ್ಯೇಕವಾಗಿ ಬಿಲ್ಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಒಮ್ಮೆ ಗಾಯಾಳು ಒಳ ರೋಗಿಯಾಗಿ ದಾಖಲಾದ ನಂತರ ಅವರು ಬಿಡುಗಡೆಯಾಗುವ ತನಕ ಒಳರೋಗಿಯಾಗಿಯೇ ಇರುತ್ತಾರೆ ಎಂದರೆ ಸರಿ.ಇನ್ ಪೇಷಂಟ್ ಮತ್ತು ಔಟ್ ಪೇಷೆಂಟ್ ಡಿಪಾರ್ಟ್ಮೆಂಟ್ ಗಳು ಬೇರೆ ಬೇರೆ ಇರುತ್ತವೆ. ಗಾಯಾಳು ಒಮ್ಮೆ ಒಳರೋಗಿಯಾಗಿ ದಾಖಲಾದ ನಂತರ ಬಿಡುಗಡೆಯಾಗುವ ತನಕ ಅವರಿಗೆ ಒಳ ರೋಗಿಯಾಗಿಯೇ ಬಿಲ್ಲನ್ನು ನೀಡಬೇಕು ಎಂದರೆ ಸರಿಯಲ್ಲ. ಒಳ ರೋಗಿ ಮತ್ತು ಹೊರ ರೋಗಿ ವಿಭಾಗಗಳನ್ನು ನಮ್ಮ ಆಸ್ಪತ್ರೆಯ ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡಿರುತ್ತೇವೆ. ಸಿ.ಟಿ ಸ್ಕ್ಯಾನ್ ಮತ್ತು ಎಕ್ಸ್-ರೇ ಗಳನ್ನು ಹೊರ ರೋಗಿಗಳ ವಿಭಾಗದವರು ಮಾಡುತ್ತಾರೆ. ಹೊರ ರೋಗಿಯಾಗಿ ಚಿಕಿತ್ಸೆ ಪಡೆದಾಗ ದಾಖಲಾತಿಗಳನ್ನು ಅವರಿಗೆ ನೀಡಬೇಕು ಎಂದರೆ ಸಾಕ್ಷಿಯು ಅವರು ಒತ್ತಾಯ ಮಾಡಿದರೆ ಮಾತ್ರ ಕೊಡುತ್ತೇವೆ ಎಂದು ನುಡಿಯುತ್ತಾರೆ.

3. ನಾನು ಅರ್ಜಿದಾರರಿಗೆ ಕ್ರೆಡಿಟ್ ಬಿಲ್ ಗಳನ್ನು ಸಹ ನೀಡಿರುತ್ತೇವೆ ಎಂದರೆ ಸರಿ. ಕ್ರೆಡಿಟ್ ಬಿಲ್ ಗಳಿಗೆ ಹಣ ಪಾವತಿ ಮಾಡಿದ ಬಗ್ಗೆ ನಾವು ಅವರಿಗೆ ಹಣ ಪಾವತಿ ರಶೀದಿ ನೀಡುತ್ತೇವೆ ಎಂದರೆ ಸರಿ. ಕ್ರೆಡಿಟ್ ಬಿಲ್ ಗಳಿಗೆ ರಶೀದಿ ಕೊಡದಿದ್ದರೆ ಅದಕ್ಕೆ ಹಣ ಬಂದಿರುವುದಿಲ್ಲ ಎಂದು ಅರ್ಥ ಎಂದರೆ ಸರಿ. ಯಾವ ಯಾವ ಚಿಕಿತ್ಸೆಗೆ ಎಷ್ಟು ಹಣ ಪಡೆದುಕೊಳ್ಳಬೇಕು ಎಂದು ಸರ್ಕಾರದ ನಿಯಮಾವಳಿ ಇದ್ದು ಅದನ್ನು ನಮ್ಮ ಆಸ್ಪತ್ರೆಯಲ್ಲಿ ನಾವು ಪ್ರದರ್ಶಿಸಿರುತ್ತೇವೆ. ಈ ಬಗ್ಗೆ ದಾಖಲೆಗಳನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನಮ್ಮ ಆಸ್ಪತ್ರೆಯಿಂದ ಒರಿಜಿನಲ್ ಮೋನೋಗ್ರಾಮ್ ಇರುವ ರಶೀದಿಯನ್ನು ನೀಡುತ್ತೇವೆ ಎಂದರೆ ಸರಿ. ನಿಪಿ-10 ರ ಬಿಲ್ ಮೋನೋಗ್ರಾಮ್ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಒಂದು ಸರ್ಜರಿಗೆ 25 ಸಾವಿರ ರೂ. ಪಡೆದುಕೊಳ್ಳಲಾಗಿರುತ್ತದೆ. ಸರ್ಜನ್ ಚಾರ್ಜಸ್ ನಮೂದಿಸಿರುವ ಮುಂದೆ ಯಾವ ಸರ್ಜನ್ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಯಾವ ಯಾವ ಚಿಕಿತ್ಸೆಗೆ ಎಷ್ಟು ಹಣ ಪಡೆಯಬೇಕು ಎಂದು ಮಾಹಿತಿ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

4. ಅರ್ಜಿದಾರರಿಗೆ ಲ್ಯಾಟರಲ್ ಮ್ಯಾಲಲಸ್ ಮತ್ತು ಮೂಳೆ ಮುರಿತದ ಗಾಯ ಆಗಿದ್ದು, ಅದಕ್ಕೆ ನಾವು ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ಎಕ್ಸ್-ರೇ ತೋರಿಸಿ ಅರ್ಜಿದಾರರಿಗೆ ಯಾವ ಭಾಗದಲ್ಲಿ ಮೂಳೆ ಮುರಿತ ಉಂಟಾಗಿದೆ ಗುರುತು ಮಾಡಲು ಸೂಚಿಸಿದ್ದು, ಅದಕ್ಕೆ ಅವರ ಗುರುತು ಮಾಡಿರುತ್ತಾರೆ. ಅರ್ಜಿದಾರರಿಗೆ ಯಾವುದೇ ಮೂಳೆ ಮುರಿತ ಉಂಟಾಗಿರಲಿಲ್ಲದಿದ್ದರೂ ಸಹ ಅವರಿಗೆ ಮೂಳೆ ಮುರಿತ ಉಂಟಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಳೆ ಮುರಿತಕ್ಕೆ ಫಾಲೋಅಪ್ ಚಿಕಿತ್ಸೆ ಮತ್ತು ಫಿಜಿಯೋಥೆರಪಿ ಅವಶ್ಯಕತೆ ಇದೆ ಎಂದರೆ ಸರಿ. ನಮ್ಮ ಸಲಹೆ ಪ್ರಕಾರ ಫಾಲೋಅಪ್ ಚಿಕಿತ್ಸೆ ಮತ್ತು ಫಿಜಿಯೋಥೆರಪಿ ಚಿಕಿತ್ಸೆ ಪಡೆದುಕೊಂಡಲ್ಲಿ ಮಣಿಕಟ್ಟಿನ ಚಲನ-ವಲನಗಳು ಸರಾಗವಾಗುತ್ತವೆ ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಫಾಲೋಅಪ್ ಚಿಕಿತ್ಸೆ ಪಡೆದುಕೊಂಡಲ್ಲಿ ಹೊರರೋಗಿಗಳ ದಾಖಲೆಯಲ್ಲಿ ಅವರು ಪಡೆದುಕೊಂಡ ಚಿಕಿತ್ಸೆಯ ವಿವರವನ್ನು ಬರೆಯುತ್ತೇವೆ ಎಂದರೆ ಸರಿ. ಅರ್ಜಿದಾರ

MVC .No.58/2025
P.W-3

ನಮ್ಮಲ್ಲಿ ಫಾಲೋ ಚಿಕಿತ್ಸೆಗೆ ಬಂದಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ಇತಿತೀಚೆಗೆ ಅರ್ಜಿದಾರರನ್ನು ಪರೀಕ್ಷಿಸಿದಾಗ ಅವರು ಫಾಲೋಅಪ್ ಚಿಕಿತ್ಸೆಯ ದಾಖಲೆಗಳನ್ನು ತಂದಿರಲಿಲ್ಲ. ಆದ್ದರಿಂದ ಅರ್ಜಿದಾರರು ಯಾವಾಗ ಫಾಲೋಅಪ್ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಕೇಂದ್ರ ಸರ್ಕಾರದ ಕೈಪಿಡಿ ಪ್ರಕಾರ ಕ್ಲಿನಿಕಲ್ ಪರೀಕ್ಷೆಗೆ ಒಳಪಡಿಸಿ ಅಂಗನ್ಯೂನ್ಯತೆಯನ್ನು ನಿರ್ಧರಿಸಬೇಕು ಎಂದರೆ ಸರಿ. ಕ್ಲಿನಿಕಲ್ ಪರೀಕ್ಷೆಗೆ ಒಳಪಡಿಸಿದಂತಹ ನೋಟ್ಸ್ ಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಹಳೆ ಎಕ್ಸ್-ರೇ ಗಳಿಗೂ ಮತುತ ಇತಿತೀಚೆಗೆ ತಂದ ಎಕ್ಸ್-ರೇ ಗಳಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ ಎಂದರೆ ಸಾಕ್ಷಿಯು ಮೂಳೆ ಕೂಡಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಯಾವುದೇ ಮೂಳೆ ಮುರಿತ ಉಂಟಾಗಿಲ್ಲದಿದ್ದರೂ ಅರ್ಜಿದಾರನಿಗೆ ಸಹಾಯ ಮಾಡುವ ಉದ್ದೇಶದಿಂದ ಉತ್ಪ್ರೇಕ್ಷೆಯಿಂದ ಅಂಗನ್ಯೂನ್ಯತೆ ಪ್ರಮಾಣವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)

**ಓ.ಹೇ.ಕೇ.ಸ.ಇದೆ.**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಹಾಸನ.